Rotary

ರೋಟರಿ **ಐಸಿರಿ** ಪರ್ಕಳ

ವಲಯ-4, ರೋ. ಜಿಲ್ಲೆ-3182

ನಮ್ಮ ನಡೆ... ಕೃಷಿಯ ಕಡೆ...

UNITE FOR GOOD



Rtn. Francesco Arezzo
R.I. President



Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 20

ದಿನಾಂಕ: 18.11.2025



Rtn. Anil Kumar
President



Rtn. Krishnappa
Secretary

## ರೋಟರಿ ಐಸಿರಿಯಿಂದ ಹನ್ನೊಂದು ಅಂಗನವಾಡಿಶಾಲೆಗಳಲ್ಲಿ ಮಕ್ಕಳ ದಿನಾಚರಣೆ



ರೋಟರಿ ಐಸಿರಿ ವತಿಯಿಂದ ಪರ್ಕಳ ಪರಿಸರದ ಹನ್ನೊಂದು ಅಂಗನವಾಡಿಗಳ ಮಕ್ಕಳಿಗೆ ಆಟಿಕೆ ಹಾಗೂ ಸಿಹಿತಿಂಡಿ ವಿತರಿಸುವ ಮೂಲಕ ಮಕ್ಕಳ ದಿನಾಚರಣೆಯನ್ನು ಸಂಭ್ರಮದಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು.

ರೋಟರಿ ಐಸಿರಿಯ ಸ್ಥಾಪಕ ಅಧ್ಯಕ್ಷರಾದ ರೊ. ಪ್ರಭಾಕರ್ ಶೆಟ್ಟಿಯವರ ಕನಸಿನ ಕಾರ್ಯಕ್ರಮವಾಗಿರುವ ಈ ಸಂಭ್ರಮಾಚರಣೆಯನ್ನು ಸಣ್ಣಕ್ಕಿಬೆಟ್ಟು, ಬಡಗಬೆಟ್ಟು ಗ್ರಾಮ ಪಂಚಾಯತ್, ಬಡಗಬೆಟ್ಟು ಶಾಲೆ, ಶಾಂತಿನಗರ, ಆದರ್ಶನಗರ ಮಣಿಪಾಲ, ಪರ್ಕಳ ಗ್ರಾಮ ಪಂಚಾಯತ್, ಬಿ. ಎಮ್. ಶಾಲೆ, ಭೈರಂಜೆ, ಆತ್ರಾಡಿ, ಕೆಳ ಆತ್ರಾಡಿ, ಶೆಟ್ಟಿಬೆಟ್ಟು ಪ್ರದೇಶಗಳ ಒಟ್ಟು ಹನ್ನೊಂದು ಅಂಗನವಾಡಿ ಶಾಲೆಗಳಿಗೆ ರೋಟರಿ ಐಸಿರಿ ಅಧ್ಯಕ್ಷ ರೊ. ಅನಿಲ್ ಕುಮಾರ್, ನಿಯೋಜಿತ ಅಧ್ಯಕ್ಷ ರೊ. ಸಂದೀಪ್ ಕುಮಾರ್, ಕಾರ್ಯದರ್ಶಿ ರೊ. ಕೃಷ್ಣಪ್ಪ, TRF ವಿಭಾಗದ ಉಸ್ತುವಾರಿ ರೊ. PHF ಪಾಂಡುರಂಗ ಲಾಗ್ವಾಂಕರ್, ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈ, ಕ್ಲಬ್ ಸರ್ವಿಸ್ ನಿರ್ದೇಶಕ ರೊ. ಸುನಿಲ್ ಕುಮಾರ್ ಭೇಟಿ ನೀಡಿ ಪುಟ್ಟಮಕ್ಕಳಿಗೆ ಸಿಹಿತಿಂಡಿ ಮತ್ತು ಆಟಿಕೆಗಳನ್ನು ವಿತರಿಸಿ ಶುಭಕೋರಿದರು. ಈ ಕಾರ್ಯಕ್ರಮ ನೆರವೇರಲು ಸಹಕಾರ ನೀಡಿದ ಸದಸ್ಯರೆಲ್ಲರಿಗೂ ಅಧ್ಯಕ್ಷರು ಧನ್ಯವಾದ ಸಲ್ಲಿಸಿದ್ದಾರೆ.

## ಆಧಾರ್ ನೋಂದಣಿ ಹಾಗು ತಿದ್ದುಪಡಿ ಅಭಿಯಾನದ ನೇತೃತ್ವವಹಿಸಿದ ರೋಟರಿ ಐಸಿರಿ



ಭಾರತೀಯ ಅಂಚೆ ಇಲಾಖೆ ಉಡುಪಿ ವಿಭಾಗದ "ಅಂಚೆ ಜನಸಂಪರ್ಕ ಅಭಿಯಾನ" ಕ್ಕೆ ಕೈ ಜೋಡಿಸಿದ ರೋಟರಿ ಐಸಿರಿಯು 80 ಬಡಗಬೆಟ್ಟು ಗ್ರಾಮಪಂಚಾಯತ್, ಸಮುದಾಯದಳ ಐಸಿರಿ, ಒಡಿಯೂರು ಶ್ರೀ ಗ್ರಾಮವಿಕಾಸ ಯೋಜನೆ ಉಡುಪಿ ವಲಯ – ಈ ಸಂಸ್ಥೆಗಳ ಸಹಯೋಗದಲ್ಲಿ ಆಧಾರ್ ನೋಂದಣಿ ಮತ್ತು ತಿದ್ದುಪಡಿ ಶಿಬಿರವನ್ನು 80 ಗ್ರಾಮಪಂಚಾಯತ್ ಸಭಾಭವನದಲ್ಲಿ ನವೆಂಬರ್ 15ರಂದು ಆಯೋಜಿಸಿತು. ನೂರನಾಲ್ಕು ಮಂದಿ ಈ ಅಭಿಯಾನದ ಪ್ರಯೋಜನವನ್ನು ಪಡೆದಿರುತ್ತಾರೆ. ಚುಟುಕಾದ ಸಭಾ ಕಾರ್ಯಕ್ರಮದೊಂದಿಗೆ ಆರಂಭವಾದ ಈ ಕಾರ್ಯಕ್ರಮವು ಸಾಯಂಕಾಲದವರೆಗೂ ಮುಂದುವರೆದು ಆಗಮಿಸಿದವರ ನೋಂದಣಿ / ತಿದ್ದುಪಡಿ ಕಾರ್ಯಕ್ಕೆ ಸಹಕಾರಿಯಾಯಿತು.



**ಅಭಿನಂದನೆಗಳು**

ರೋಟರಿ ಐಸಿರಿಯ

2027-28 ಸಾಲಿನ

(6ನೇ ವರ್ಷದ) ಅಧ್ಯಕ್ಷರಾಗಿ

**ರೊ. ಕೆ.ಪ್ರಕಾಶ್ ಶೆಣೈ**

ಯವರು ಆಯ್ಕೆಯಾಗಿರುತ್ತಾರೆ.

## ಪ್ರೇರಣಾ ಸಿರಿ: ರೋಟರಿ ಮಾಹಿತಿ

*(Continued from the previous issue)*



Past Assistant Governor
Rtn. MPHF. Dr. Ganesha A
Treasurer, Rotary Aisiri

Reasons Why a Rotarian should contribute to The Rotary Foundation (TRF):

1. The administration cost of fund collection as well as its deployment cost are far less than those of other foundations.
2. The Annual Fund contribution helps global projects as well as local projects.
3. Once we give to TRF we will not be knowing whom and how our money is going to benefit. Our giving goes round the world without the tag of individual giver identity.
4. When Ravi Shankar Dakoju asked why chose TRF to donate such a fabulous sum (100 Crores), his answer was a counter question: "Can you show me a better charity than TRF where I can entrust my money". His answer or rather question tells what and how TRF is !!!.
5. When we help for higher studies of a student abroad, the ward may feel alien and lonely whereas if we sponsor an eligible candidate for Rotary scholarship, quite a number of Rotarians will be there to take care of the ward.

*(Ref. 'Know Your Rotary' by Rtn. N. Bhaskaran Pillai)*

*Will be continued in next edition....*



Rtn. PHF. Guruprasad Kamath
Vice Chairman – RCC
Rotary Dist. 3182

### " ನಾನು.... ನನ್ನಿಂದ... "

ನಾನು ಮತ್ತು ನನ್ನಿಂದ ಎಂಬ ಈ ಎರಡು ಪದಗಳು ಒಬ್ಬ ಸಾಮಾನ್ಯ ಮಾನವನ ಜೀವನದಲ್ಲಿ ತುಂಬಾ ದೊಡ್ಡ ಪಾತ್ರ ವಹಿಸುತ್ತದೆ. ಜೀವನದ ಪ್ರಮುಖ ಘಟ್ಟದೊಳಗೆ ಮಾನವ "ನಾನು... ನನಗೆ... ನನ್ನದು ... " ಎಂದು ಬದುಕುತ್ತಾನೆ. ನಾನು ಎಂಬ ಮೋಹ ಮಾನವನನ್ನು ಎಲ್ಲಿಯವರೆಗೆ ಕೊಂಡೊಯ್ಯುತ್ತದೆ ಎಂದು ಯಾರು ಊಹಿಸಲಾರ.

ನನ್ನಿಂದ ಎಂಬ ಭಾವನೆ ಪ್ರತಿಯೊಬ್ಬ ಮನುಷ್ಯನಲ್ಲೂ ಇದ್ದೇ ಇರುತ್ತದೆ. ಯಾವುದೇ ಒಳ್ಳೆಯ ಕಾರ್ಯಗಳು ನಡೆದರೆ ನನ್ನಿಂದ ಎಂದು ಬೆನ್ನು ತಟ್ಟಿ ಹೇಳುತ್ತಾನೆ. ಅದೇ ಯಾವುದೇ ಅವಘಡ ಬಂದರೆ ಯಾರಿಂದ ಎಂದು ಪ್ರಶ್ನಿಸುತ್ತಾನೆ.

ನಾನು ಕಂಡುಕೊಂಡಂತೆ "ನಾನು.... ನನ್ನಿಂದ...." ನಮ್ಮ ಜೀವನದ ಎರಡು ಪ್ರಮುಖ ಪದಗಳು. ಆದರೂ ಒಬ್ಬ ಸಾಮಾನ್ಯ ಮಾನವ ಜೀವನದ ಉದ್ದಕ್ಕೂ ಅದರಿಂದ ಎಷ್ಟು ದೂರವಿರುವನೊ ಅಷ್ಟೇ ಸಂತೋಷದಿಂದ ಬದುಕುವನು. "ನಾನು.... ನನ್ನಿಂದ...." ಎಂಬ ಭಾವನೆ ಬೇಕು. ಆದರೆ ಅದನ್ನು ನಾವು ಎಷ್ಟು ಇತಿಮಿತಿಯಲ್ಲಿ ನಮ್ಮ ಜೀವನದಲ್ಲಿ ಅಳವಡಿಸುವೆವೋ ಅಷ್ಟೇ ಸಂತೋಷದಿಂದ ನಾವೆಲ್ಲರೂ ಬದುಕಬಹುದು. "ನಾನು.... ನನ್ನಿಂದ...." ಎಂದು ಮೆರೆದ ಎಲ್ಲರೂ ಕೊನೆಗೆ ಇತರರ ಕೃಪೆಯಲ್ಲಿ ಬದುಕುವ ಸನ್ನಿವೇಶ ನಾವು ಕಂಡಿದ್ದೇವೆ.

ಮನುಷ್ಯ ತನ್ನ ಜೀವನದ ಮೇಲೆ ಯಾವುದೇ ರೀತಿ ಅದರ ಪ್ರಭಾವ ಬೀಳಗೊಡದೆ, ತನ್ನ ಅಹಂ ಬಿಟ್ಟೂ ಬಿಡದೆ ಎಲ್ಲಾ ಸಂಬಂಧಗಳನ್ನು ದೂರ ಮಾಡುತ್ತಾನೆ. "ನಾನು.... ನನ್ನಿಂದ...." ಎಂಬ ಭಾವನೆ ಇರುವ ಮಾನವ ಅವನು ಬರುವ ಮೊದಲು ಜಗತ್ತು ನಡೆಯುತಿತ್ತು. ಅವನು ಹೋದ ನಂತರವೂ ಜಗತ್ತು ನಡೆಯುತ್ತೆ ಎಂಬುವುದನ್ನೂ ಮರೆತು ಜೀವಿಸುತ್ತಾನೆ !

ಆದುದರಿಂದ, ನಾವೆಲ್ಲ ಈ ಎರಡು ಭಾವನೆಗಳನ್ನು ನಮ್ಮ ಜೀವನದಲ್ಲಿ ಎಷ್ಟು ಸಾಧ್ಯವೋ ಅಷ್ಟು ದೂರವಿಡಲು ಪ್ರಯತ್ನಿಸೋಣ.



ಜಿಲ್ಲಾ ಗವರ್ನರ್ ಅಧಿಕೃತ ಭೇಟಿಯ ಪೂರ್ವ ತಯಾರಿಯಲ್ಲಿ ನಿರತರಾಗಿರುವ ಅಧ್ಯಕ್ಷ ರೊ. ಅನಿಲ್ ಕುಮಾರ್, ಕಾರ್ಯದರ್ಶಿ ರೊ. ಕೃಷ್ಣಪ್ಪ, ಕೋಶಾಧಿಕಾರಿ ರೊ. PHF ಡಾ. ಎ. ಗಣೇಶ್ ಮತ್ತು ನಿಕಟಪೂರ್ವ ರೊ. ಸುನಿಲ್ ಕುಮಾರ್.

'ದ ರೋಟರಿ ಫೌಂಡೇಶನ್'ಗೆ ನೀಡುವ ದೇಣಿಗೆಯನ್ನು ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ನವದೆಹಲಿಯ ದಕ್ಷಿಣ ಏಷ್ಯಾ ಕಾರ್ಯಚಟುವಟಿಕೆಗಳ ಕಚೇರಿಗೆ ನೋಂದಾಯಿತ ಅಂಚೆಯ ಮೂಲಕ ನವೆಂಬರ್ 14ರಂದು ಕಳುಹಿಸಲಾಗಿದೆ. ಮತ್ತು ಗತ ಆರ್ಥಿಕ ವರ್ಷದ ಆದಾಯ ಮತ್ತು ಖರ್ಚಿನ ವಿವರಗಳನ್ನಿ ಲೆಕ್ಕ ಪರಿಶೋಧಕರಿಗೆ ಸಲ್ಲಿಸಲಾಗಿದ್ದು ಅಡಿಟ್ ರಿಪೋರ್ಟ್ ಈ ತಿಂಗಳ ಅಂತ್ಯದೊಳಗೆ ಬರುವ ನಿರೀಕ್ಷೆ ಇರುವುದಾಗಿ ಕೋಶಾಧಿಕಾರಿ ರೊ. PHF ಡಾ. ಎ. ಗಣೇಶ್ ತಿಳಿಸಿರುತ್ತಾರೆ.



"ಪೋಲಿಯೋ ಮುಕ್ತ ವಿಶ್ವಕ್ಕಾಗಿ ನನ್ನ ಕೊಡುಗೆ" ಅಕ್ಟೋಬರ್ 17 ರಂದು ಕೈಗೊಂಡ ಪಲ್ಸ್ ಪೋಲಿಯೋ ವಾಕಥಾನ್ ಮೂಲಕ ಸಂಗ್ರಹಿಸಿದ 23,350/– ರೂಪಾಯಿಯ ನಿಧಿಯನ್ನು ನವೆಂಬರ್ 9 ರಂದು ಜಿಲ್ಲಾ TRF ಸಮ್ಮೇಳನದ ಸಂದರ್ಭದಲ್ಲಿ PDG ರೊ. ರಾಜಾರಾಮ ಭಟ್ ಅವರಿಗೆ ಹಸ್ತಾಂತರಿಸಲಾಯಿತು.

## ಬೌದ್ಧಿಕ ಸಿರಿ ಕತ್ತೆಯನ್ನು ಹೊತ್ತೊಯ್ಯುತ್ತಿದ್ದಾರೆ!

ಒಂದು ಹಳ್ಳಿಯಲ್ಲಿ ಅಪ್ಪ, ಮಗ ವಾಸಿಸುತ್ತಿದ್ದರು. ಅವರು ಒಂದು ಕತ್ತೆಯನ್ನು ಸಾಕಿದ್ದರು. ಕಾಲಕ್ರಮೇಣ ಅವರು ದೊಡ್ಡಸಿಟಿಗೆ ವಲಸೆ ಹೋಗಲು ನಿರ್ಧರಿಸಿದರು. ಅದಕ್ಕಾಗಿ ಕತ್ತೆಯನ್ನು ಯಾರಿಗಾದರೂ ಮಾರೋಣವೆಂದು ಪೇಟೆಯ ಕಡೆ ಹೊರಟರು.

ಇದನ್ನು ನೋಡಿದ ಹಳ್ಳಿಯ ಜನ, "ಈ ಮೂರ್ಖರು ನಡೆದುಕೊಂಡು ಹೋಗುವ ಬದಲಿಗೆ, ಕತ್ತೆಯ ಮೇಲೆ ಕುಳಿತು ಸವಾರಿ ಮಾಡಬಹುದಲ್ಲವೇ" ಎಂದು ಮಾತನಾಡಿಕೊಳ್ಳುತ್ತಿದ್ದನ್ನು ಕೇಳಿ, ಅಪ್ಪ – ಮಗ ಇಬ್ಬರೂ ಕಥೆಯ ಮೇಲೆ ಕುಳಿತು ಸವಾರಿ ಹೊರಟರು.

ಮುಂದೆ ಹೋಗುತ್ತಿರಲು, "ಇವರಿಗೆ ಕತ್ತೆಯ ಮೇಲೆ ಒಂದು ಚೂರು ದಯೆ ಇಲ್ಲ, ಇಬ್ಬರೂ ಕುಳಿತು, ತಮ್ಮ ಭಾರವನ್ನು ಅದರ ಮೇಲೆ ಹಾಕಿ ಸವಾರಿ ಮಾಡುತ್ತಿದ್ದಾರೆ" ಕೆಲವರು ಕುಹಕವಾಡಿದರು. ಆಗ, ಅಪ್ಪ ಕೆಳಗಿಳಿದು ಮಗನನ್ನು ಮಾತ್ರ ಕುಳ್ಳಿರಿಸಿ ಪ್ರಯಾಣ ಮುಂದುವರಿಸಿದರು.

ಇದನ್ನು ನೋಡಿದ ಮುಂದಿನ ಹಳ್ಳಿಯ ಜನ "ಎಂತಹ ಸ್ವಾರ್ಥಿ ಮಗ. ತಾನು ಕತ್ತೆಯ ಮೇಲೆ ಕುಳಿತು, ಅಪ್ಪನನ್ನು ನಡೆಸಿಕೊಂಡು ಬರುತ್ತಿದ್ದಾನೆ" ಎನ್ನ ತೊಡಗಿದರು. ಇದನ್ನು ಕೇಳಿ, ಮಗ ಕೆಳಗಿಳಿದು ಅಪ್ಪನನ್ನು ಕೂರಿಸಿ ಪ್ರಯಾಣ ಮುಂದುವರಿಸಿದರು.

ಮುಂದಿನ ಸರದಿ "ತಾನು ಕತ್ತೆಯ ಮೇಲೆ ಕುಳಿತು, ಆ ಚಿಕ್ಕ ಹುಡುಗನನ್ನು ನಡೆಸಿಕೊಂಡು ಬರುತ್ತಿದ್ದಾನೆ. ಎಂಥಾ ಸ್ವಾರ್ಥಿ ಅಪ್ಪ ಇವ" ಎನ್ನುವರದ್ದು. ಇದನ್ನೂ ಕೇಳಿಸಿಕೊಂಡ ಅಪ್ಪ, ಮಗ ಇಬ್ಬರೂ ಕೆಳಗಿಳಿದು, ಕತ್ತೆಯನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಪ್ರಯಾಣ ಮುಂದುವರಿಸಿದರು.

ಪೇಟೆಯಲ್ಲಿ ಇದನ್ನು ನೋಡಿ ಜನರು ನಕ್ಕು "ಮೂರ್ಖ ಜನರು ಕತ್ತೆಯ ಮೇಲೆ ಸವಾರಿ ಮಾಡುವ ಬದಲು ಕತ್ತೆಯನ್ನು ಹೊತ್ತೊಯ್ಯುತ್ತಿದ್ದಾರೆ" ಎಂದರು.

ಇದರನ್ನೆಲ್ಲ ಕೇಳಿ ಬೇಸತ್ತ ಅಪ್ಪ, ಮಗನಿಗೆ ಹೀಗೆ ಹೇಳಿದ, 'ಮಗಾ, ಬೇರೆಯವರ ಕೆಲಸಕಾರ್ಯದಲ್ಲಿ ವಿನಾ ಮೂಗುತೂರಿಸಿ, **ಕುಹಕವಾಡುವುದೇ ಕೆಲವರ ಕೆಲಸ.** ಏನೇ ಮಾಡಿದರು ತಪ್ಪೆನ್ನುವ ಇಂತಹವರ ಮಾತು ಕೇಳಿ, ತೃಪ್ತಿಪಡಿಸಲು ಹೋದರೆ ನಾವು ಹೀಗೇ ಮೂರ್ಖರಂತೆ ಕಾಣುತ್ತೇವೆ. ನಮ್ಮ ಬುದ್ಧಿಗೆ ಸರಿಯಾದದ್ದು ಮಾಡಿ, ಉಳಿದದ್ದನ್ನೆಲ್ಲಾ ಗಾಳಿಗೆ ಬಿಡಬೇಕು. !"

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಆಧಾರ್ ನೋಂದಣಿ ಹಾಗು ತಿದ್ದುಪಡಿ ಅಭಿಯಾನದ ನೇತೃತ್ವವಹಿಸಿದ ರೋಟರಿ ಐಸಿರಿ



(*ಮೊದಲ ಪುಟದಿಂದ*) ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದ 80ನೇ ಬಡಗಬೆಟ್ಟು ಗ್ರಾಮಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ವಿ. ಎಸ್. ಕುಲಕರ್ಣಿ ತಮ್ಮ ಭಾಷಣದಲ್ಲಿ ಕಾರ್ಯಕ್ರಮಕ್ಕೆ ಸಹಭಾಗಿತ್ವ ನೀಡಿದ ಸಂಘ–ಸಂಸ್ಥೆಗಳನ್ನು ಅಭಿನಂದಿಸಿ, 'ಸರಕಾರೀ ಸಂಸ್ಥೆಗಳ ಜೊತೆಗೆ ಸರಕಾರೇತರ ಸಂಸ್ಥೆಗಳೂ ಕೈಜೋಡಿಸಿ ಕೆಲಸ ಮಾಡಿದಾಗ ಫಲಿತಾಂಶ ಅದ್ಭುತವಾಗಿರುತ್ತದೆ' ಎಂದು ಹೇಳಿದರು.

80ನೇ ಬಡಗಬೆಟ್ಟು ಗ್ರಾಮಪಂಚಾಯತ್ ಅಧ್ಯಕ್ಷರಾದ ಶ್ರೀ ಕೇಶವ ಕೋಟ್ಯಾನ್ ಈ ಕಾರ್ಯಕ್ರಮದ ಉಪಯುಕ್ತತೆ ಬಗ್ಗೆ ಮಾತನಾಡಿ ಇದರ ಸಂಪೂರ್ಣ ಪ್ರಯೋಜನ ಪಡೆಯಲು ಕರೆ ನೀಡಿದರು. ಉಪಾಧ್ಯಕ್ಷೆ ಶ್ರೀಮತಿ ರೂಪಾ ನಾಯಕ್ ಕಾರ್ಯಕ್ರಮಕ್ಕೆ ಶುಭಹಾರೈಸಿದರು.

ಉಡುಪಿ ವಿಭಾಗದ ಅಂಚೆ ಅಧೀಕ್ಷಕರಾದ ಶ್ರೀ ರಮೇಶ್ ಪ್ರಭು ಮತ್ತು ಅಂಚೆ ನಿರೀಕ್ಷರಾದ ಶ್ರೀ ಶಂಕರ ಲಮಾಣಿ ಅಂಚೆ ಇಲಾಖೆಯಲ್ಲಿ ಲಭ್ಯವಿರುವ ಸೇವೆಗಳ ಕುರಿತು ಮಾತನಾಡಿ, ಜನ ಸಮುದಾಯದ ಬಳಿಗೇ ಆಧಾರ್ ನೋಂದಣಿ ಶಿಬಿರ ಬರುವಲ್ಲಿ ಶ್ರಮಿಸಿದ ಇಂದಿನ ಸಂಘಟಕರನ್ನು ಮತ್ತು ಪರ್ಕಳ ಅಂಚೆ ಕಚೇರಿಯ ಶ್ರೀಮತಿ ಭಾರತೀ ಮತ್ತು ಸಿಬ್ಬಂದಿಯವರನ್ನು ವೇದಿಕೆಗೆ ಕರೆದು ಪುಷ್ಪ ನೀಡಿ ಅಭಿನಂದಿಸಿದರು. ರೊ. PHF. ಪಾಂಡುರಂಗ ಲಾಗ್ವಾಂಕರ್ ಅವರನ್ನು ಅಧ್ಯಕ್ಷರು ವೇದಿಕೆಗೆ ಕರೆದು ಪುಷ್ಪ ನೀಡಿ ಗೌರವಿಸಿದರು.

ಒಡಿಯೂರು ಶ್ರೀ ಗ್ರಾಮವಿಕಾಸ ಯೋಜನೆ ಉಡುಪಿ ವಲಯದ ಸೇವಾ ದೀಕ್ಷಿತರಾದ ಶ್ರೀಮತಿ ಅಶ್ವಿನಿ, ರೋಟರಿ ಸಮುದಾಯದಳ ಐಸಿರಿ ಪರ್ಕಳದ ಕಾರ್ಯದರ್ಶಿ ಶ್ರೀಮತಿ ಶಾರದಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರೊ. PHF. ಪಾಂಡುರಂಗ ಲಾಗ್ವಾಂಕರ್ ಮತ್ತು ಶ್ರೀಮತಿ ಶೋಭಾ ರೋಟರಿ ಐಸಿರಿ ಮತ್ತು ಸಮುದಾಯದಳ ಐಸಿರಿಯ ಅಧ್ಯಕ್ಷರುಗಳಿಗೆ ಕೊರಳ ಲಾಂಛನ ತೊಡಿಸಿದರು. ಸಭಾಧ್ಯಕ್ಷತೆ ವಹಿಸಿದ ರೋಟರಿ ಐಸಿರಿ ಅಧ್ಯಕ್ಷ ರೊ. ಅನಿಲ್ ಕುಮಾರ್ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮುದಾಯದಳ ಐಸಿರಿ ಪರ್ಕಳದ ಅಧ್ಯಕ್ಷರಾದ ಶ್ರೀಮತಿ ಲಕ್ಷ್ಮೀ ನಾಯ್ಕ್ ಧನ್ಯವಾದ ಸಮರ್ಪಣೆಗೈದರು. ರೊ. PHF. ಗುರುಪ್ರಸಾದ್ ಕಾಮತ್ ಕಾರ್ಯಕ್ರಮ ನಿರೂಪಿಸಿದರು.



## ಕಾರ್ಯದರ್ಶಿಯವರ ವರದಿ



ರೋಟರಿ ಐಸಿರಿಯ 18ನೇ ವಾರದ ಸಭೆಯು 11/11/2025 ರಂದು RCC ಕಾರ್ಯಾಲಯದಲ್ಲಿ ನಡೆಯಿತು. ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಕೊರಳಲಾಂಛನ ತೊಡಿಸಿ, ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೊ. ಪ್ರಭಾಕರ್ ಯು. ರೆಂಜಾಳ ಪ್ರಾರ್ಥನೆ ನಡೆಸಿದರು. ಅಧ್ಯಕ್ಷ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವಾರದ ವರದಿಯನ್ನು ಮಂಡಿಸಿದರು.

15 ನವೆಂಬರ್ ರಂದು ನಡೆಯಲಿರುವ ಆಧಾರ್ ನೋಂದಣಿ ಹಾಗೂ ತಿದ್ದುಪಡಿ ಕಾರ್ಯಕ್ರಮದ ಕರಪತ್ರ ಹಾಗೂ ಆಹ್ವಾನ ಪತ್ರವನ್ನು ಸಮುದಾಯ ಸೇವಾ ನಿರ್ದೇಶಕರಾದ ರೊ. ಕೆ. ಪ್ರಕಾಶ್ ಶೆಣೈ ಅವರು ಬಿಡುಗಡೆಗೊಳಿಸಿದರು. ಈ ಕಾರ್ಯಕ್ರಮವನ್ನು ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು ಆಯೋಜಿಸುತ್ತಿರುವ ರೊ. ಪಾಂಡುರಂಗ ಲಾಗ್ವಾಂಕರ್ ಅವರು ಕಾರ್ಯಕ್ರಮದ ಪೂರ್ವತಯಾರಿ ಬಗ್ಗೆ ಮಾಹಿತಿ ನೀಡಿದರು.

ರೋಟರಿ ಐಸಿರಿಯ ವಾರದ ಬುಲೆಟಿನ್ ಅನ್ನು ರೊ. ಡಾ. ಪ್ರಭಾಕರ ಯು. ರೆಂಜಾಳ ಅವರು ಬಿಡುಗಡೆ ಮಾಡಿದರು. ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಸಹಕರಿಸಿದರು. ರೊ. ಡಾ. ಪ್ರಭಾಕರ್ ಯು. ರೆಂಜಾಳ ಅವರು ವಾರದ ಬುಲೆಟಿನ್ ಮತ್ತು ಅದರಲ್ಲಿ ಬರುವ ಮಾಹಿತಿಯನ್ನು ಪ್ರಶಂಸಿಸಿದರು. ಜೊತೆಗೆ ಮುಂದಿನ ವಾರ ಅವರ ಮನೆಯಲ್ಲಿ ನಡೆಯಲಿರುವ ಧನ್ವಂತರಿ ಪೂಜೆಗೆ ಐಸಿರಿಯ ಎಲ್ಲಾ ಸದಸ್ಯರನ್ನು ಆಹ್ವಾನಿಸಿದರು.

ಈ ಬುಲೆಟಿನ್ ನಲ್ಲಿ monthly theme TRF ಬಗ್ಗೆ ರೊ. ಡಾ. ಎ. ಗಣೇಶ್ ಮಾಹಿತಿ ಲೇಖನ ನೀಡಿರುತ್ತಾರೆ. ರೊ. ಮಂಜುನಾಥ ಉಪಾಧ್ಯ ಎಂ. ಅವರು ರೊ. ಕೆ. ಪ್ರಕಾಶ್ ಶೆಣೈ ಅವರನ್ನು 2027–28 ರ ಸಾಲಿಗೆ ಅಧ್ಯಕ್ಷರಾಗಿ ಆಯ್ಕೆ ಆಗಿರುವುದಕ್ಕೆ ಅಭಿನಂದಿಸಿದರು. ರೊ. ಗುರುಪ್ರಸಾದ್ ಕಾಮತ್ ಅವರು ರೊ. ಕೆ. ಪ್ರಕಾಶ್ ಶೆಣೈ ಅವರನ್ನು ಅಭಿನಂದಿಸಿ ಶುಭಹಾರೈಸಿದರು. ಜಿಲ್ಲಾ TRF ಸೆಮಿನಾರ್ ನ ಅನುಭವಗಳನ್ನು ಹಂಚಿಕೊಂಡರು. ರೊ. ಡಾ. ಎ. ಗಣೇಶ್ ಅವರು ರೊ. ಕೆ. ಪ್ರಕಾಶ್ ಶೆಣೈ ಅವರನ್ನು ಅಭಿನಂದಿಸಿ ರೋಟರಿ ಐಸಿರಿಗೆ ಉಜ್ವಲ ಭವಿಷ್ಯ ಇದೆ ಎಂದರು. ಜೊತೆಗೆ ಜಿಲ್ಲಾ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ ಶುಭ ಹಾರೈಸಿದರು. ರೊ. ರಾಜೇಶ್ ಡಿ. ಶೆಣೈ ಅವರು ರೊ. ಕೆ. ಪ್ರಕಾಶ್ ಶೆಣೈ ಅವರನ್ನು ತಾವು ಜೇಸಿ ಸಂಸ್ಥೆಯಲ್ಲಿ ಉತ್ತಮ ನಾಯಕನಾಗಿ ಕಂಡ ಅನುಭವಗಳನ್ನು ಹಂಚಿಕೊಂಡರು ಮತ್ತು ಅವರಿಗೆ ಶುಭ ಹಾರೈಸಿದರು. ರೊ. ಸ್ಮಿತಾ ಜಿ. ಕಾಮತ್ ಅವರು ರೊ. ಕೆ. ಪ್ರಕಾಶ್ ಶೆಣೈ ಅವರಿಗೆ ಶುಭ ಹಾರೈಸಿ ಜಿಲ್ಲಾ TRF ಸೆಮಿನಾರ್ ನ ತಿರುಳನ್ನು ವಿವರಿಸಿದರು. ರೊ. ಕೃಷ್ಣಪ್ಪ ಅವರು ರೊ. ಕೆ. ಪ್ರಕಾಶ್ ಶೆಣೈ ಅವರನ್ನು ಅಭಿನಂದಿಸಿದರು. ಜಿಲ್ಲಾ ಸಾಂಸ್ಕೃತಿಕ ಸ್ಪರ್ಧೆ ಯಲ್ಲಿ ಸ್ಕಿಟ್ ನಲ್ಲಿ ಭಾಗವಹಿಸುವ ಬಗ್ಗೆ ಸದಸ್ಯರ ಅಭಿಪ್ರಾಯ ಪಡೆದರು. ಕ್ಲಬ್ ಬೆಳೆಯಲು ಟ್ರಸ್ಟ್ ನ ಅವಶ್ಯಕತೆ ಇದೆ ಎಂದರು. ಹೊಸ Rotaract ಮತ್ತು Interact ಸ್ಥಾಪಿಸಲು ಸದಸ್ಯರ ಸಹಕಾರ ಕೋರಿದರು.

ರೊ. ಕೆ. ಪ್ರಕಾಶ್ ಶೆಣೈಯವರು 2027–28ನೇ ಸಾಲಿಗೆ ರೋಟರಿ ಐಸಿರಿಯ ಅಧ್ಯಕ್ಷರಾಗಿ ಆಯ್ಕೆ ಮಾಡಿದ ಸದಸ್ಯರಿಗೆಲ್ಲ ಧನ್ಯವಾದ ಸಮರ್ಪಿಸಿದರು. ಜೊತೆಗೆ ರೋಟರಿಗಾಗಿ ಇನ್ನೂ ಹೆಚ್ಚಿನ ಸಮಯ ನೀಡುವುದಾಗಿ ತಿಳಿಸಿದರು. ರೊ. ಸುದರ್ಶನ್ ಪೈ ಅವರು ರೊ. ಕೆ. ಪ್ರಕಾಶ್ ಶೆಣೈ ನಮಗೆಲ್ಲ ಆದರ್ಶ ಎಂದು ಶುಭ ಹಾರೈಸಿದರು. ರೊ. ಕೊರಗಪ್ಪ ಶೆಟ್ಟಿಗಾರ್ ಅವರು ಕಳೆದ ಒಂದು ತಿಂಗಳಲ್ಲಿ ನಡೆದ ಎಲ್ಲ ಕಾರ್ಯಕ್ರಮಗಳೂ ಉತ್ತಮವಾಗಿ ನಡೆದಿವೆ ಎಂದರು. ರೊ. ಗೀತಾಶ್ರೀ ಎಂ. ಉಪಾಧ್ಯ ಅವರು ರೊ. ಕೆ. ಪ್ರಕಾಶ್ ಶೆಣೈ ಅವರನ್ನು ಅಭಿನಂದಿಸಿ ಶುಭ ಹಾರೈಸಿದರು. ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಅವರು ರೊ. ಕೆ. ಪ್ರಕಾಶ್ ಶೆಣೈ ಅವರನ್ನು ಒಬ್ಬ ಅದ್ಭುತ ನಾಯಕ ಎಂದು ಗುರುತಿಸಿದರು. ತಮ್ಮ ಜೇಸಿ ಅನುಭವದಲ್ಲಿ ಹಲವಾರು ಬಾರಿ ಪ್ರಕಾಶ್ ಶೆಣೈ ಅವರ ದೂರದೃಷ್ಟಿತ್ವವನ್ನು ಗಮನಿಸಿರುವುದಾಗಿ ಹೇಳಿ ಅಭಿನಂದಿಸಿದರು. ರೋಟರಿಯಲ್ಲಿ ತೊಡಗಿಸಿಕೊಂಡರೆ ಆರೋಗ್ಯ ಮತ್ತು ನೆಮ್ಮದಿ ಎರಡೂ

## "ಐಶ್ವರ್ಯ" 19 ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ **ಹತ್ತೊಂಭತ್ತನೇ** ಆವೃತ್ತಿಯನ್ನು ರೋಟರಿ ಐಸಿರಿಯ ಪಲ್ಸ್ ಪೋಲಿಯೋ ವಿಭಾಗದ ಉಸ್ತುವಾರಿ ರೊ. PHF. ಡಾ. ಪ್ರಭಾಕರ್ ಯು. ರೆಂಜಾಳ್ 11/11/2025ರಂದು ಬಿಡುಗಡೆಗೊಳಿಸಿದರು.



ರೋಟರಿ ಐಸಿರಿಯ 18ನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೋಟೇರಿಯನ್ ಆಯ್ಕೆಯನ್ನು ರೊ. ಕೆ. ಪ್ರಕಾಶ್ ಶೆಣೈ ನಡೆಸಿದರು. ರೊ. PHF. ಗುರುಪ್ರಸಾದ್ ಕಾಮತ್ ಅದೃಷ್ಟಶಾಲಿ ವ್ಯಕ್ತಿಯಾಗಿ ಆಯ್ಕೆಯಾದರು.

ದೊರೆಯುತ್ತವೆ ಎಂದರು.

ಅಧ್ಯಕ್ಷರ ರೊ. ಅನಿಲ್ ಕುಮಾರ್ DG ವಿಸಿಟ್ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ರೊ. ಕೆ. ಪ್ರಕಾಶ್ ಶೆಣೈಯವರನ್ನು ಶಾಲುಹಾಕಿ ಅಭಿನಂದಿಸಿದರು. ರೊ. ಡಾ. ಪ್ರಭಾಕರ್ ಯು. ರೆಂಜಾಳ ಅವರನ್ನು Polio walkathonಗೆ ನೀಡಿದ ಕೊಡುಗೆಗಾಗಿ ಗುರುತಿಸಿದರು. ರೊ. ಪಾಂಡುರಂಗ ಲಾಗ್ವಾಂಕರ್ ಅವರನ್ನು ಆಧಾರ್ ತಿದ್ದುಪಡಿ ಕಾರ್ಯಕ್ರಮಕ್ಕೆ ಶ್ರಮಿಸಿದ್ದಕ್ಕಾಗಿ ಗುರುತಿಸಲಾಯಿತು.

Lucky Rotarian ಆಯ್ಕೆಯನ್ನು ರೊ. ಕೆ. ಪ್ರಕಾಶ್ ಶೆಣೈ ಅವರು ನಡೆಸಿದರು. ರೊ. ಗುರುಪ್ರಸಾದ್ ಕಾಮತ್ ಅವರು ಅದೃಷ್ಟಶಾಲಿ ವ್ಯಕ್ತಿಯಾಗಿ ಮೂಡಿಬಂದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ಧನ್ಯವಾದ ಸಮರ್ಪಿಸಿದರು. ದಂಡಪಾಣಿ ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.